**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. 622 /2019**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 28-05-2025.**

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಎಪಿಪಿ ಯವರಿಂದಃ**

**4.** ದಿಃ21-01-2018 ರಂದು ಸಂಜೆಃ 4.00 ಗಂಟೆಗೆ ಪೊಲೀಸರು ಕೃಷ್ಣ ಗ್ಯಾಸ್ ಏಜೆನ್ಸಿ ಕಛೇರಿಗೆ ಬಂದು ಇಬ್ಬರು ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿಯು ಕೃತ್ಯ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕೃಷ್ಣ ಗ್ಯಾಸ್ಏಜೆನ್ಸಿಯ ಪಾಲುದಾರಿಕೆ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ3 ಎಂದು ಗುರುತಿಸಲಾಯಿತು. ಸಾಕ್ಷಿಯು ಇಂಡಿಯನ್ ಆಯಿಲ್ ಕಾರ್ಪೊರೇಷನ್ ರವರಿಂದ ನೀಡಿದ ನೇಮಕಾತಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ4 ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ01-04-2015 ರಂದು ನನ್ನ ಮತ್ತು ಆರೋಪಿ ನಂಬರ್ 1 ರವರ ನಡುವೆ ಆದ ಕರಾರು ಪತ್ರವನ್ನು ಹಾಜರು ಪಡಿಸಿದ್ದು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿಃ5 ಎಂದು ಗುರುತಿಸಲಾಯಿತು.

5. ಸಾಕ್ಷಿಯು ಫಾರಂ ನಂಬರ್ 1 ಅನ್ನು ಹಾಜರು ಪಡಿಸಿದ್ದು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿಃ6 ಎಂದು ಗುರುತಿಸಲಾಯಿತು. ಸಾಕ್ಷಿಯು ರಶೀದಿಗಳನ್ನು ಹಾಜರು ಪಡಿಸಿದ್ದು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿಃ7 ಮತ್ತು 8 ಎಂದು ಗುರುತಿಸಲಾಯಿತು. ನಾನು ಎಸ್. ಬಿ.ಐ ಬ್ಯಾಂಕ್ ಸಿರುಗುಪ್ಪರವರಿಗೆ ನೀಡಿದ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿಃ 9 ಎಂದು

ಗುರುತಿಸಲಾಯಿತು. ಎಸ್. ಬಿ.ಐ ಬ್ಯಾಂಕ್ ಸಿರುಗುಪ್ಪ ರವರು ನೀಡಿದ ಚೆಕ್ ನಗದೀಕರಣ ಆದ ಬಗ್ಗೆ ಪತ್ರ ವನ್ನು ಹಾಜರು ಪಡಿಸಿದ್ದು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿಃ 10 ಮತ್ತು 11 ಎಂದು ಗುರುತಿಸಲಾಯಿತು. ನಾನು ದಿಃ20-01-2017 ರಂದು ಎಸ್. ಬಿ.ಐ ಬ್ಯಾಂಕ್ ಸಿರುಗುಪ್ಪರವರಿಗೆ ನೀಡಿದ ಪತ್ರ ವನ್ನು ಹಾಜರು ಪಡಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ 12 ಎಂದು ಗುರುತಿಸಲಾಯಿತು. ಎಸ್. ಬಿ. ಐ ರವರು 1 ನೇ ಆರೋಪಿಗೆ ಬರೆದ ಪತ್ರ ವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿಃ13 ಎಂದು ಗುರುತಿಸಲಾಯಿತು. ಆರೋಪಿ ಎಸ್. ಬಿ. ಐ ಬ್ಯಾಂಕ್ ಗೆ ನೀಡಿದ ಉತ್ತರದ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿಃ14 ಎಂದು, ಎಸ್. ಬಿ. ಐ ಬ್ಯಾಂಕ್ ರವರು ನನಗೆ ಬರೆದ ಪತ್ರ ವನ್ನು ಹಾಜರು ಪಡಿಸಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿಃ15 ಎಂದು, ನಾನು ಎಸ್. ಬಿ. ಐ ಪತ್ರ ವನ್ನು ಹಾಜರು ಪಡಿಸಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿಃ16 ಎಂದು, ನಾಲ್ಕು ಚೆಕ್‌ಗಳ ದೃಢೀಕೃತ ನಕಲುಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿಃ17 ರಿಂದ 20 ಎಂದು ಗುರುತಿಸಲಾಯಿತು. 11 ಪುಟಗಳ ಕೃಷ್ಣ ಗ್ಯಾಸ್ ಸರ್ವಿಸ್ ಹೆಸರಿನಲ್ಲಿದ್ದ ಬ್ಯಾಂಕ್ ಖಾತೆಯ ವಿವರನ್ನು ಒಟ್ಟಾರೆಯಾಗಿ ನಿಪಿಃ21 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ನಾನು ಗುರುತಿಸಬಲ್ಲೆ. ಆರೋಪಿತರು ಗೈರು ಹಾಜರಾಗಿದ್ದು ಆರೋಪಿತರ ಪರ ವಕೀಲರು ಆರೋಪಿತರ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟೀಸವಾಲು ಮಾನ್ಯ ಆರೋಪಿತರ ಪರ ವಕೀಲರು ಕಾಲವಕಾಶವನ್ನು ಕೋರಿದ್ದು , ಕೊರಿಕೆಯ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)
ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ.**